**ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ, ನ್ಯಾಯಾಲಯ, ಗುಂಡ್ಲುಪೇಟೆ**

**ಸಿ.ಸಿ ಸಂಖ್ಯೆಃ 173/2025**

| | | |
|---|---|---|
| ಹೆಸರು | ಶ್ರೀ ರಂಜಿತ | ಚಾಸಾಃ 01 |
| ತಂದೆ ಹೆಸರು | ಶ್ರೀ ಮಹದೇವಯ್ಯ | ಫ್ರಾಸಾಃ 01 |
| ವಯಸ್ಸು | 27 ವರ್ಷ | ಸಾಕ್ಷಿಯನ್ನು ದಿನಾಂಕಃ 23.01.2026 ರಂದು ಪ್ರಮಾಣೀಕರಿಸಲಾಯಿತು. |
| ಉದ್ಯೋಗ | ಕೆಲಸ ಇಲ್ಲಾ | |
| ವಾಸ | ಹೋರೆಯಾಲ ಗ್ರಾಮ | |

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ–**

ಚಾಸಾ–2 ನನ್ನ ತಂದೆ. ಚಾಸಾ–3 ರಿಂದ 6 ನನಗೆ ಗೊತ್ತು. ಅವರು ನಮ್ಮ ಗ್ರಾಮದವರು. ದಿಃ 07.12.2024 ರಂದು ಸೃಷ್ಟಿ ಹಬ್ಬದ ಪ್ರಯುಕ್ತ ನಾನು ಮತ್ತು ನನ್ನ ತಂದೆ ತನಿ ಎರೆಯಲು ಹೋಗಿ ಪೂಜೆ ಮುಗಿಸಿಕೊಂಡು ಬರುತ್ತಿದಾಗ ನಾವು ಬೇರೆಯವರ ಜಮೀನಿನಲ್ಲಿ ಮರಳನ್ನು ಸಂಗ್ರಹಿಸಿದ್ದೇವು. ನಾನು ಮತ್ತು ನನ್ನ ತಂದೆ ಸದರಿ ಮರಳನ್ನೂ ಯಾರೋ ತುಂಬಿಕೊಂಡಿದ್ದಾರೆ ಎಂದು ಮಾತನಾಡಿಕೊಂಡು ಬರುತಿದ್ದೇವು. ಆಗ 1ನೇ ಆರೋಪಿ ನಮ್ಮನ್ನು ಅಡ್ಡಗಟ್ಟಿ ಏನೂ ನೀವು ಮಾತನಾಡುತ್ತಿದ್ದೀರಿ ಎಂದು ಗಲಾಟೆ ತೆಗೆದು ನನ್ನ ಜಡೆಯನ್ನು ಹಿಡಿದು ಎಳೆದಾಡಿ ಕಾಲಿನಿಂದ ನನಗೆ ಹಲ್ಲೆ ಮಾಡಿದರು. ನನ್ನ ಮೈಕೈಯನ್ನು ಪರಚಿದ. ನನ್ನ ತಂದೆ ಜಗಳ ಬಿಡಿಸಲು ಬಂದರು. ಆಗ ನನ್ನ ತಂದೆಗೆ ಆರೋಪಿ 1 ರಿಂದ 3 ರವರು ಹಲ್ಲೆ ಮಾಡಿದರು. ನಮ್ಮ ಮನೆಯಲ್ಲಿ ಇದ್ದ ದೊಣ್ಣೆಯಿಂದ 2ನೇ ಆರೋಪಿ ನನ್ನ ತಂದೆಯ ಬಲಗೈಗೆ ಹೊಡೆದರು. ಗಲಾಟೆ ಕಾಲಕ್ಕೆ ನನ್ನ ಕುತ್ತಿಗೆಯಲ್ಲಿ ಇದ್ದ 10 ಗ್ರಾಂ ನ ಚಿನ್ನದ ಸರ ಕಳೆದುಹೋಗಿತ್ತು.

ಆಗ ನಾವು ಪೊಲೀಸರನ್ನು ಕರೆಸಿದೇವು. ಆಗ ಸಮಯ ಬೆಳಿಗ್ಗೆ 9.45 ಆಗಿತ್ತು. ನನ್ನ ತಂದೆಯನ್ನು ಬೇಗೂರು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದೇವು. ವೈದ್ಯರ ಸಲಹೆ ಮೇರೆಗೆ

ಹೆಚ್ಚಿನ ಚಿಕಿತ್ಸೆಗಾಗಿ ಚಾಮರಾಜನಗರ ಜಿಲ್ಲಾ ಆಸ್ಪತ್ರೆಗೆ ಕರೆದುಕೊಂಡು ಹೋದೆ. ಅಲ್ಲಿ ಶಸ್ತ್ರ ಚಿಕಿತ್ಸೆ ಮಾಡಬೇಕೆಂದು ನನ್ನ ತಂದೆಯನ್ನು ಒಳರೋಗಿಯಾಗಿ ದಾಖಲು ಮಾಡಿದೆ. ಪೊಲೀಸರು ಆಸ್ಪತ್ರೆಗೆ ಬಂದು ನನ್ನಿಂದ ದೂರು ಪಡೆದರು. ನಾನು ಬೇಗೂರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದೆ. ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ1 ಎಂದು, ಸಾಕ್ಷಿಯ ಸಹಿಯನ್ನು ನಿಪಿ1(ಎ) ಎಂದು ಗುರ್ತಿಸಲಾಯಿತು. ನಾನು ನ್ಯಾಯಾಲಯಕ್ಕೆ ಬಂದು ಹೇಳಿಕೆ ನೀಡಿದ್ದೇನೆ. ಸಾಕ್ಷಿಯು ಹಲ್ಲೆಗೆ ಬಳಸಿದ ದೊಣ್ಣೆಯನ್ನು ನೋಡಿ ಗುರುತಿಸಿದ್ದು, ಅದನ್ನು ಮು.ಮಾ.1 ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಗಳನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ಕಲಂ.183 ಬಿ.ಎನ್.ಎಸ್. ರಡಿ ನೀಡಿದ ಹೇಳಿಕೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ2 ಎಂದು, ಸಾಕ್ಷಿಯ ಸಹಿಯನ್ನು ನಿಪಿ2(ಎ) ಎಂದು ಗುರ್ತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಎಪಿಪಿರವರು ಅನುಮತಿ ಕೋರಿರುತ್ತಾರೆ. ದಾಖಲೆಗಳನ್ನು ಪರಿಶೀಲಿಸಿ ಅನುಮತಿಸಿದೆ.)

**ಪಾಟೀ ಸವಾಲು: ಮಾನ್ಯ ಎಪಿಪಿ ಯವರಿಂದಃ**

1ನೇ ಆರೋಪಿ ಗಲಾಟೆಯಾದಾಗ ನನ್ನನ್ನು ಮುಂದೆ ಹೋಗದಂತೆ ಅಡ್ಡಲಾಗಿ ನಿಂತು ನನ್ನನ್ನು ಹಿಡಿದು ಎಳೆದಾಡಿದ ಎಂದರೆ ಸರಿ. 2 ಮತ್ತು 3ನೇ ಆರೋಪಿಗಳು ನನ್ನ ತಂದೆಯನ್ನು ಕೈಗಳಿಂದ ಹಲ್ಲೆ ಮಾಡಿ ಬಟ್ಟೆ ಅರಿದು ಹಾಕಿದರು ಎಂದರೆ ಸರಿ. ದಿಃ 08.12.2024 ರಂದು ಪೊಲೀಸರಿಗೆ ದೂರು ನೀಡಿದ್ದೇನೆ ಎಂದರೆ ಸರಿ. ದಿಃ 23.03.2025 ರಂದು ಈಗ ಓದಿ ಹೇಳಿದಂತೆ ನಾನು ಮರು ಹೇಳಿಕೆ ನೀಡಿದ್ದು, ಆದರೆ ಸದರಿ ಹೇಳಿಕೆಯಲ್ಲಿ ನಾನು ದೂರು ನೀಡುವಾಗ ಗಲಾಟೆಯಲ್ಲಿ ನನ್ನ ಚಿನ್ನದ ಸರ ಕಳೆದುಹೋಗಿದೆ ಎಂದು ನಾನು ತಿಳಿಸಿದ್ದು, ಸದರಿ

ಚಿನ್ನದ ಸರವು ನನಗೆ ಸಿಕಿದ್ದು ನನ್ನ ಬಳಿ ಇರುತ್ತದೆ. ಇದನ್ನು ಯಾರು ಕಿತ್ತುಕೊಂಡಿಲ್ಲ ಎಂಬ ಹೇಳಿಕೆಯನ್ನು ನೀಡಿಲ್ಲ. ಸದರಿ ಹೇಳಿಕೆಯ ಭಾಗವನ್ನು ನಿಪಿ3 ಎಂದು ಗುರುತಿಸಲಾಯಿತು.

**ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ, ಸಮಯ ನೀಡಿ ಪಾಟೀ ಸವಾಲಿಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಉಕ್ತ ಲೇಖನ ಕೊಟ್ಟು ಓದಿ ನೋಡಿ ಸರಿಪಡಿಸಿ ನಂತರ ಸಹಿ ಮಾಡಲಾಯಿತು)

**ಓ ಹೇ ಕೇ ಸ ಇ ಎ ಒ**

**(ಗಿರೀಶ ಆರ್.ಬಿ)**
**ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ**
**ಗುಂಡ್ಲುಪೇಟೆ**